ಮಲಪ್ರಭಾ ಯೋಜನೆ ಆ ವಲಯ, ಧಾರವಾಡ ಇವರಿಗೆ ಸೂಚಿಸ ಲಾಗಿದೆ.

ಆ) ಮಲಪ್ರಭಾ ನದಿಯ ಎರಡು ಬದಿಯಲ್ಲಿ (ಜಲಾಶಯದ ಹಿನ್ನಿರಿನ ಪ್ರದೇಶದಲ್ಲಿ) ತುಂಬಿರುವ ಮಣ್ಣಿನ ಬಗ್ಗೆ ವಿವರವಾಗಿ ಪರಿಶೀಲಿಸಿ ಸರ್ವೆ ಕಾರ್ಯ ಕೈಗೊಂಡು ಹೂಳಿನ ನಿಖರವಾದ ಮಾಹಿತಿಯನ್ನು ಅಂದಾಜಿಸಿ ಸೂಕ್ತ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಮುಖ್ಯ ಇಂಜಿನಿಯರ್ ಮಲಪ್ರಭಾ ಯೋಜನೆ ಆ ವಲಯ, ಧಾರವಾಡ ಇವರಿಗೆ ಸೂಚಿಸಲಾಗಿದ್ದು, ಅವರಿಂದ ವರದಿ ಬಂದ ನಂತರ ಸಾಧ್ಯಾಸಾಧ್ಯತೆಗಳ ಪರಿಶೀಲಿಸಿ ಮುಂದಿನ ಅಗತ್ಯಕ್ರಮ ಕೈಗೊಳ್ಳಲಾ ಗುವುದು.

ಶ್ರೀ ವಿಶ್ವನಾಥ್ ಈ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿ ದ್ದಾರೆ, ನಾನು ಕೇಳುವುದೇನೆಂದರೆ, ಮಲಪ್ರಭಾ ಹಿನ್ನೀರು ಪೂರ್ತಿ ನನಗೆ ಬೇಕಾಗಿಲ್ಲ, ನನಗೆ ಬೇಕಾಗಿರುವುದೆಂದರೆ, ನಯಾನಗರ ಹಳ್ಳಿ ಇದೆ, ಬೈಲಹೊಂಗಲ ಕುಡಿಯುವ ಸಲುವಾಗಿ ಬ್ಯಾರೇಜ್ ಕಟ್ಟುತ್ತಿದ್ದಾರೆ, ಅಲ್ಲಿಂದ ಜಾಕ್ವೆಲ್ ವರೆಗೆ 500 ಕಿ.ಮೀ ವರೆಗೆ ಬೇಗ ಹೂಳು ಎತ್ತಿಸಿದರೆ ಸ್ವಲ್ಪ ಸರಿ ಹೋಗುತ್ತದೆ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸಿ.ಇ.ಒ ಅವರಿಗೆ instruction ಕೊಡಲಾಗಿದೆ, ಇವರು ಹೇಳುವುದು, ಆ ಜಾಕ್ವೆಲ್‌ನಿಂದಾಗುವ ಏನೊಂದು ರೀಚ್ ಇದೆ, ಆ ಕೆಲಸವನ್ನು ನಾವು ಆದ್ಯತೆ ಮೇಲೆ ತೆಗೆದುಕೊಳ್ಳುತ್ತೇವೆ.

ಕೆರೆಗಳಿಗೆ ನೀರು ಒದಗಿಸುವುದು

152(1754); ಸದಸ್ಯರ ಹೆಸರು: ಶ್ರೀ ಸುರೇಶ್ ಬಾಬು, ಸಿ.ಬಿ.(ಚಿಕ್ಕನಾಯಕನ ಹಳ್ಳಿ)

ಅ) ಚಿಕ್ಕನಾಯಕನಹಳ್ಳಿ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿ ಯಲ್ಲಿ 40 ಕೆರೆಗಳು ಬರುತ್ತದ್ದು, ಈ ಕೆರೆಗಳಿಗೆ ನೀರು ಹರಿಸಲು

ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ: ಸದರಿ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ಪ್ರಸ್ತುತ ಸಾಲಿನಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.(ವಿವರ ನೀಡುವುದು);

ಶ್ರೀ ಶಿವರಾಜ ಎಸ್. ತಂಗಡಗಿ(ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯಾವುದೇ ಯೋಜನೆಗಳು ಇರುವುದಿಲ್ಲ. ಆದರೆ ತುಮಕೂರು ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಚಿಕ್ಕನಾಯಕನಹಳ್ಳಿ ಮತಕ್ಷೇತ್ರದಲ್ಲಿ 38 ಸಣ್ಣ ನೀರಾವರಿ ಕೆರೆಗಳಿದ್ದು, ಈ ಪೈಕಿ 25 ಕೆರೆಗಳಿಗೆ ಜಲಸಂಪನ್ಮೂಲ ಇಲಾಖೆಯ ಕಾವೇರಿ ನೀರಾವರಿ ನಿಗಮದ ವತಿಯಿಂದ ನೀರನ್ನು ಹರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಜಲ ಸಂವರ್ಧನೆ ಯೋಜನಾ ಸಂಘದ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿಯಲ್ಲಿ ಚಿಕ್ಕನಾಯಕಹಳ್ಳಿ ಮತಕ್ಷೇತ್ರದ 17 ಸಣ್ಣ ನೀರಾವರಿ ಮತ್ತು 27 ಜಿಲ್ಲಾ ಪಂಚಾಯಿತಿ ಹೀಗೆ ಒಟ್ಟು 44 ಕೆರೆಗಳನ್ನು ಸಮುದಾಯದ ಬೇಡಿಕೆ ಆಧಾರದ ಮೇಲೆ 2009 ರಿಂದ 2012ರ ಅವಧಿಯಲ್ಲಿ ಕೋಡಿ ರಿಪೇರಿ, ತೂಬು ರಿಪೇರಿ, ನೀರಾವರಿ ಕಾಲುವೆ ಮತ್ತು ಪೋಷಕ ಕಾಲುವೆ ರಿಪೇರಿ, ಏರಿ ಬಲವರ್ಧನೆ ಮುಂತಾದ ಕಾಮಗಾರಿಗಳನ್ನು ಸಮುದಾಯದ ಸಹ ಭಾಗಿತ್ವದಲ್ಲಿ ಕೆರೆ ಸಂಘಗಳ ಮುಖಾಂತರ ದುರಸ್ಥಿಗೊಳಿಸಲಾಗಿದೆ. ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯು ಪ್ರಸ್ತುತ ಸಾಲಿನಲ್ಲಿ ಯಾವುದೇ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಹಣ ಬಿಡುಗಡೆಯಾಗಿರುವದಿಲ್ಲ.

2014–15ನೇ ಸಾಲಿನ ಅಯವ್ಯಯ ಘೋಷಣೆಯಂತೆ ಪ್ರತಿ ವಿಧಾನ ಸಭಾಕ್ಷೇತ್ರದ ಒಂದು ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪ್ರಸ್ತುತ ಸಾಲಿನ ಲೆಕ್ಕಶೀರ್ಷಿಕೆ "4702–ಕೆರೆಗಳ ದುರಸ್ಥಿ ಮತ್ತು ಪುನಃಶ್ಚೇತನ ಅಡಿ `40.00 ಕೋಟಿ

ಅನುದಾನ ಒದಗಿಸಲಾಗಿದೆ. ಅದರಂತೆ ಚಿಕ್ಕನಾಯಕನಹಳ್ಳಿ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಬೋರನಕಣಿವೆ ಜಲಾಶಯವನ್ನು ಸದರಿ ಯೋಜನೆ ಅಡಿ ` 100.00ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿ ಪಡಿಸಲು ಗುರುತಿಸಿದ್ದು, ಕ್ರಿಯಾ ಯೋಜನೆ ತಯಾರಿಸಲಾಗುತ್ತಿದೆ.

ಚಿಕ್ಕನಾಯಕನಹಳ್ಳಿ ಮತಕ್ಷೇತ್ರದ ವ್ಯಾಪ್ತಿಗೆ ಬರುವ 38 ಸಣ್ಣ ನೀರಾವರಿ ಕೆರೆಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಜಲಸಂಪನ್ಮೂಲ ಇಲಾಖೆಯ ಕಾವೇರಿ ನೀರಾವರಿ ನಿಗಮದ ವತಿಯಿಂದ ನೀರನ್ನು ಹರಿಸಲು ಉದ್ದೇಶಿಸಿರುವ ಕೆರೆಗಳ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುರೇಶ್‌ಬಾಬು ಸಿ. ಬಿ. ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1754ಕ್ಕೆ ಅನುಬಂಧ–1

ಚಿಕ್ಕನಾಯಕನಹಳ್ಳಿ ಮತಕ್ಷೇತ್ರದಲ್ಲಿನ ಸಣ್ಣ ನೀರಾವರಿ ಕೆರೆಗಳ ವಿವರ

ಕ್ರ.ಸಂ	ಹೋಬಳಿ	ಯೋಜನೆ ಹೆಸರು	ನದಿ ಕೊಳ್ಳ	ಉಪಕೊಳ್ಳ	ಅಚ್ಚುಕಟ್ಟು (ಹೆಕ್ಟೇರು	ಕೆರೆ ಅಂಗಳದ ವಿಸ್ತೀರ್ಣ ಹೆಕ್ಟೇರು)	ನೀರಿನ ಶೇಖರಣಾ ಸಾಮರ್ಥ್ಯ (ಎಂಸಿ ಎಫ್‌ಟಿ)	ಯೋಜಿತ ನೀರಿನ ಬಳಕೆ (ಎಂ ಸಿಎಫ್‌ಟಿ)
1	**2**	**3**	**4**	**5**	**6**	**7**	**8**	**9**
1	ಕಸಬಾ	ಬಾವನಹಳ್ಳಿ ದುರ್ಗದ ಕೆರೆ	ಕೃಷ್ಣ	ಸುವರ್ಣಮುಖಿ	183.46	66.67	55.00	9.14
2		ಬಾವನಹಳ್ಳಿ ಹೊಸಕೆರೆ	ಕೃಷ್ಣ	ಸುವರ್ಣಮುಖಿ	182.60	7.60	17.00	9.11
3		ನವಿಲೆ ಕೆರೆ	ಕೃಷ್ಣ	ಸುವರ್ಣಮುಖಿ	147.29	76.88	76.50	13.38
4		ನಾಗತಿಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	71.41	64.34	18.33	5.97

5		ಮುದ್ದೇನಹಳ್ಳಿ ಊರಮುಂದಿನಕೆರೆ	ಕೃಷ್ಣ	ಸುವರ್ಣಮುಖಿ	42.57	23.87	6.32	2.69
6		ಮುದ್ದೇನಹಳ್ಳಿ ಮೇಲಿನ ಕೆರೆ	ಕೃಷ್ಣ	ಸುವರ್ಣಮುಖಿ	82.57	34.39	13.27	5.01
7	ಶೆಟ್ಟಿಕೆರೆ	ಶೆಟ್ಟಿಕೆರೆ	ಕೃಷ್ಣ	ಸುವರ್ಣಮುಖಿ	134.98	100.40	70.80	13.83
8		ಮಾದಿಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	58.00	32.40	6.00	5.90
9		ಗೋಪಾಲನಹಳ್ಳಿ	ಕೃಷ್ಣ	ಸುವರ್ಣಮುಖಿ	43.20	12.00	4.30	6.18
10		ಪೆಮ್ಮಲದೇವರಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	88.70	26.10	28.80	29.57
11		ಪಂಕಜನಹಳ್ಳಿ ಕೆರೆ	ಕಾವೇರಿ	ಶಿಂಷಾ	52.47	42.90	6.30	4.06
12	ಕಂದೀಕೆರೆ	ಕಂದಿಕೆರೆನೊಣವಿನ ಕೆರೆ	ಕೃಷ್ಣ	ಸುವರ್ಣಮುಖಿ	127.57	66.36	47.12	7.50
13		ಕಂದಿಕೆರೆ ಹಿರೇಕೆರೆ	ಕೃಷ್ಣ	ಸುವರ್ಣಮುಖಿ	121.72	107.24	53.40	14.70
14		ಸಾದರಹಳ್ಳಿ ರಂಗನಕೆರೆ	ಕೃಷ್ಣ	ಸುವರ್ಣಮುಖಿ	50.00	8.09	5.82	8.50

15		ಸಿಂಗದಹಳ್ಳಿ ದಳವಾಯಿ ಕೆರೆ	ಕೃಷ್ಣ	ಸುವರ್ಣಮುಖಿ	305.10	119.78	112.60	48.20
16		ಸಿದ್ದನಕಟ್ಟೆ ಕೆರೆ	ಕೃಷ್ಣ	ಸುವರ್ಣಮುಖಿ	151.65	53.82	21.12	16.50
17		ಗಂಟೇನಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	748.65	89.12	133.59	164.14
18		ಬೆಳವಾಡಿ ಕೆರೆ	ಕೃಷ್ಣ	ಸುವರ್ಣಮುಖಿ	42.00	37.85	4.00	5.60
19		ಅಶ್ರಿಹಾಳ್ ಕೆರೆ	ಕೃಷ್ಣ	ಸುವರ್ಣಮುಖಿ	40.00	10.20	4.50	4.50
20		ಶಿಡ್ಯಾ ಅಕ್ಕನವರ ಕೆರೆ	ಕೃಷ್ಣ	ಸುವರ್ಣಮುಖಿ	50.52	110.47	81.96	7.10
21	ಹಂದನಕೆರೆ	ಹಂದನಕೆರೆ ಹಿರೇಕೆರೆ	ಕೃಷ್ಣ	ಸುವರ್ಣಮುಖಿ	45.80	39.30	8.10	5.25
22		ಬಂಗಾರಕೆರೆ	ಕೃಷ್ಣ	ಸುವರ್ಣಮುಖಿ	45.90	17.00	8.36	3.50
23		ಸೊರಲಮಾವು ಕೆರೆ	ಕೃಷ್ಣ	ಸುವರ್ಣಮುಖಿ	49.78	46.20	21.17	4.37
24		ಹೊಸಕೆರೆ ಕೆರೆ	ಕೃಷ್ಣ	ಸುವರ್ಣಮುಖಿ	45.34	39.70	12.80	5.30
25		ಯಳ್ಳೇನಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	46.77	20.17	7.45	8.05

26		ಎಣ್ಣೇಗೆರೆ ಕೆರೆ	ಕೃಷ್ಣ	ಸುವರ್ಣಮುಖಿ	46.53	45.30	16.99	7.50
27		ಬೆಳಗುಲಿ ಕೆರೆ	ಕೃಷ್ಣ	ಸುವರ್ಣಮುಖಿ	78.86	93.50	56.99	8.75
28		ಮಲ್ಲಿಗೆರೆ ಕೆರೆ	ಕೃಷ್ಣ	ಸುವರ್ಣಮುಖಿ	42.06	14.98	4.96	6.50
29		ಬನ್ನಿಕೆರೆ ಕೆರೆ	ಕೃಷ್ಣ	ಸುವರ್ಣಮುಖಿ	49.78	46.20	21.17	4.10
30		ಗೋಪಾಲಪುರ ಕೆರೆ	ಕೃಷ್ಣ	ಸುವರ್ಣಮುಖಿ	68.10	55.80	12.02	7.20
31		ದಗ್ಗೇನಹಳ್ಳಿ ಕೆರೆ	ಕೃಷ್ಣ	ಸುವರ್ಣಮುಖಿ	52.00	15.00	4.80	6.50
32	ಹುಳಿಯಾರು	ಬೋರನಕಣಿವೆ ಡ್ಯಾಂ	ಕೃಷ್ಣ	ಸುವರ್ಣಮುಖಿ	675.02	1346.62	2423.60	105.13
23		ಬೆಳ್ಳಾರ ಹೊಸಕೆರೆ	ಕೃಷ್ಣ	ಸುವರ್ಣಮುಖಿ	45.61	12.96	8.90	2.26
24		ಹುಳಿಯಾರ ಅಮಾನಿಕೆರೆ	ಕೃಷ್ಣ	ಸುವರ್ಣಮುಖಿ	141.60	162.80	99.79	19.56
35		ಸೋಮನಹಳ್ಳಿ ಗಣದಾಳ ಕೆರೆ	ಕೃಷ್ಣ	ಸುವರ್ಣಮುಖಿ	96.80	66.82	69.63	7.38
26		ಚಿಕ್ಕಬಿದರೆ ಕೆರೆ	ಕೃಷ್ಣ	ಸುವರ್ಣಮುಖಿ	56.40	59.94	13.38	5.15

37		ಜೋಡಿತಿಮ್ಲಾಪುರ ಕೆರೆ	ಕೃಷ್ಣ	ಸುವರ್ಣಮುಖಿ	280.00	198.45	105.46	21.43
38		ದೇವರಮರಡಿ ಕೆರೆ	ಕೃಷ್ಣ	ಸುವರ್ಣಮುಖಿ	325.60	74.52	49.99	16.23
		ಒಟ್ಟು 38 ಕೆರೆಗಳು			4916.41	3445.74	3712.29	625.74

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಸುರೇಶ ಬಾಬು ಸಿ.ಬಿ. ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1754 ಕ್ಕೆ ಅನುಬಂಧ–2

ಯೋಜನೆಯಡಿಯಲ್ಲಿ ಬರುವ ಕೆರೆಗಳ ವಿವರಗಳು ಈ ಕೆಳಕಂಡಂತಿವೆ

ತುಮಕೂರು ಶಾಖಾ ನಾಲೆಯ ವಿವರ

1	ಪ್ರಾರಂಭಿಕ ಸರಪಳಿ	ತುಮಕೂರು ಶಾಖಾ ನಾಲೆಯ ಸರ: 45150 ಮೀ
2	ಭೂಮಟ್ಟ	819.01 ಮೀ
3	ನಾಲಾ ತಳಮಟ್ಟ	814.75 ಮೀ
4	ಎಫ್.ಬಿ.ಎಲ್.	818.95 ಮೀ

ನೀರನ್ನು ಹರಿಸಲು ಉದ್ದೇಶಿಸಿರುವ ಕೆರೆಗಳ ವಿವರ: ಚಿಕ್ಕನಾಯಕನ ಹಳ್ಳಿ ತಾಲ್ಲೂಕು

ಕ್ರ.ಸಂ	ಕೆರೆಗಳ ಹೆಸರು	ನೀರಿನ ಸಂಗ್ರಹಣಾ ಸಾಮರ್ಥ್ಯ (ಎಂ.ಸಿ.ಎಫ್.ಟಿ.ಗಳಲ್ಲಿ)
1	**2**	**3**
1	ಸಾಸಲು ಪೆಮ್ಮಲದೇವರ ಕೆರೆ	28.08
2	ಶೆಟ್ಟೀಕೆರೆ	71.83
3	ದಾಸೀಹಳ್ಳಿ ಕೆರೆ	6.56
4	ಕೋಡ್ಲಾಗರ ಕೆರೆ	5.50
5	ಚುಂಗನಹಳ್ಳಿ ಕೆರೆ	11.00
6	ಮಾರಸಂದ್ರ ಕೆರೆ	1.97
7	ನವಿಲೆ ಕೆರೆ	76.50

8	ಮೇಲನಹಳ್ಳಿ ಕೆರೆ	7.33
9	ಅಣೆಕಟ್ಟೆ	30.00
10	ದಬ್ಬೇಘಟ್ಟ ಕೆರೆ	2.13
11	ಚಿಕ್ಕನಾಯಕನಹಳ್ಳಿ	45.00
12	ಕಂದ್ರೀಕೆರೆ	100.52
13	ಮಚ್ಚಸಂದ್ರ ಕೆರೆ	10.30
14	ಅಜ್ಜನಕೆರೆ	6.79
15	ಪಟ್ಟದೇವರಕೆರೆ	20.00
16	ಹಾಲ್ಕುರಿಕೆ ಕೆರೆ	25.00
17	ಕುಪ್ಪೂರು ಕೆರೆ	25.00
18	ಕುಪ್ಪೂರು ಕೆರೆ	18.20
19	ತಮ್ಮಡಿಹಳ್ಳಿ	1.24
20	ತಿಮ್ಲಾಪುರ ಜೋಡಿಕೆರೆ	105.40
21	ಹುಳಿಯಾರು ಕೆರೆ	99.79
	ಒಟ್ಟು	**732.35**

ತುಮಕೂರು ಶಾಖಾ ನಾಲೆಯ ಸರಪಳಿ 48.175 ರಿಂದ ಏತ ನೀರಾವರಿ ಮೂಲಕ ನೀರನ್ನು ಎತ್ತಿ ಹರಿಸುವ ಕೆರೆಗಳ ವಿವರಗಳು:

ಕ್ರ.ಸಂ	ಕೆರೆಯ ಹೆಸರು	ನೀರಿನ ಸಂಗ್ರಹಣಾ ಸಾಮರ್ಥ್ಯ (ಎಂ.ಸಿ.ಎಫ್.ಟಿ.ಗಳಲ್ಲಿ)
1	2	3
1	ನಡುವನಹಳ್ಳಿ ಕೆರೆ	9.75
2	ಜೆ.ಸಿ.ಪುರ ಕೆರೆ	18.26
3	ಮಲಗೊಂಡನಹಳ್ಳಿ(ನಾಗೇನಹಳ್ಳಿ)	7.97
4	ಬ್ಯಾಡರಹಳ್ಳಿ ಕೆರೆ	4.43
	ಒಟ್ಟು	48.57

ಶ್ರೀ ಸುರೇಶ್ ಬಾಬು.ಸಿ.ಬಿ: ಮಾನ್ಯ ಅಧ್ಯಕ್ಷರೆ, ಕೆರೆಕಟ್ಟೆಗಳನ್ನು ಮಹಾರಾಜರ ಕಾಲದಲ್ಲಿ ಕಟ್ಟಿದವು, ಎಲ್ಲವೂ ಕೂಡ ಶಿಥಿಲವಾಗಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ. ಒಂದೊಂದು ವರ್ಷಕ್ಕೆ ಒಂದೊಂದು ಕೆರೆ ತೆಗೆದುಕೊಳ್ಳತ್ತೇವೆಂದು ಹೇಳುತ್ತಾರೆ. ಆ ಕೆರೆಗಳಲ್ಲಿ ನೀರು ಬಂದಂಥ ಸಂದರ್ಭದಲ್ಲಿ ಅಲ್ಲಿ ನೀರು ಹೋಗುವುದನ್ನು ನೋಡಿದಾಗ, ಅವೆಲ್ಲವನ್ನೂ ಅಭಿವೃದ್ಧಿ ಮಾಡಬೇಕು. ದಯಮಾಡಿ, ಅದರ ಕಡೆಗೆ ಹೆಚ್ಚಿನ ಗಮನವನ್ನು ಹರಿಸಿ ಅಭಿವೃದ್ಧಿ ಮಾಡಬೇಕು. ಆ ಬಗ್ಗೆ ಹೆಚ್ಚು ಗಮನ ಹರಿಸಿ ನಮ್ಮಲ್ಲಿರುವ ಎಲ್ಲಾ ಕೆರೆಗಳಿಗೂ ಕೂಡ ಅಚ್ಚುಕಟ್ಟಿಗೆ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಆರ್ಥಿಕ ನೆರವನ್ನು ನೀಡಲೆಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತಾನೆ.

ಶ್ರೀ ಶಿವರಾಜ್ ಎಸ್.ತಂಗಡಗಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ಕೆರೆಯನ್ನು ತೆಗೆದುಕೊಂಡಿದ್ದೇವೆ. ನಂತರ ಅವರ ಕ್ಷೇತ್ರದಲ್ಲಿ ಬರುವ ಕೆರೆ

ಗಳನ್ನು ಹಂತ ಹಂತವಾಗಿ ನಮ್ಮ ಅನುದಾನದ ಲಭ್ಯತೆಯ ಆಧಾರದ ಮೇಲೆ ತೆಗೆದುಕೊಂಡು ಅಭಿವೃದ್ಧಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸುರೇಶ್ ಬಾಬು.ಸಿ.ಬಿ: ಏನಾಗಿದೆ ಎಂದರೆ ಮಳೆ ಇಲ್ಲದೆ ಎಲ್ಲಾ ಕಡೆ ಹಾಳಾಗಿದೆ.

ಅಧ್ಯಕ್ಷರು: ಏನಾಗಿದೆ ಎಂಬ ಪ್ರಶ್ನೆಯಲ್ಲ. ಏನಾಗಬೇಕೆನ್ನುವುದನ್ನು ಕೇಳಿ.

ಶ್ರೀ ಸುರೇಶ್ ಬಾಬು.ಸಿ.ಬಿ: ಕೆರೆಗಳ ಅಭಿವೃದ್ಧಿಯಾಗಬೇಕು.

ಅಧ್ಯಕ್ಷರು: ಅದನ್ನು ಮಾಡಿ.

ಶ್ರೀ ಸುರೇಶ್ ಬಾಬು ಸಿ.ಬಿ: ಮಾನ್ಯ ಮಂತ್ರಿಗಳು ಹಂತವಾಗಿ ವರ್ಷಕ್ಕೆ ಒಂದೊಂದು ಕೊಡುತ್ತೇವೆಂದು ಹೇಳುತ್ತಾರೆ, ಮಂತ್ರಿಗಳನ್ನು ಕೇಳಿ ಮಳೆ ಬರುವುದಿಲ್ಲ.

ಅಧ್ಯಕ್ಷರು: ಅವರು[ಸದಸ್ಯರು] ಹೇಳುವುದನ್ನು ಗಮನದಲ್ಲಿಟ್ಟುಕೊಂಡು ಆದ್ಯತೆ ಮೇಲೆ ಮಾಡಿ.

ಶ್ರೀ ಶಿವರಾಜ್ ಎಸ್.ತಂಗಡಗಿ: ನೀವು ಹೇಳಿದಂತೆ ಮತ್ತು ಮಾನ್ಯ ಸದಸ್ಯರು ಹೇಳಿದಂತೆ ಹಣದ ಲಭ್ಯತೆ ಮೇಲೆ ಕ್ರಮ ವಹಿಸುತ್ತೇವೆ.

ಶ್ರೀ ಎನ್.ಚಲುವರಾಯಸ್ವಾಮಿ: ಒಂದೇ ಮಾಡಲಿ, ಒಂದನ್ನೇ ಸಂಪೂರ್ಣವಾಗಿ ಕೆನಾಲ್ ರಿಪೇರಿ ಮಾಡಿ. ಹೂಳು ತೆಗೆದು ಕೆಲಸ ಮುಗಿಸ ಬೇಕು. ನೀವು ಒಂದು ಕೋಟಿ, ಐವತ್ತು ಲಕ್ಷ ಅಲ್ಲ. ಹತ್ತೇ ಲಕ್ಷ ಕೊಡಿ.

ಅಧ್ಯಕ್ಷರು: ಇದು ಅವರ ಕ್ಷೇತ್ರದ್ದು ಬಿಡಿ, ನೀವು ಏತಕ್ಕೆ ಮಾತ ನಾಡುತ್ತೀರಿ?

ಶ್ರೀ ಸುರೇಶ್ ಬಾಬು ಸಿ.ಬಿ: ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಮಾಡ ಲೆಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್ ವಿಶ್ವನಾಥ್: ಇದೇ ಇಲಾಖೆಗೆ ಸಂಬಂಧಿಸಿದಂತೆ ಈಗ ನನಗೆ ಲಿಖಿತ ಮೂಲಕ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ, ಅಧಿಕಾರಿಗಳೆಲ್ಲಾ ಸುಳ್ಳು ಸುಳ್ಳು ವರದಿಗಳನ್ನು ಕೊಡುತ್ತಿರುವುದು, ಅವರು ಕೊಡುತ್ತಿರುವ ಉತ್ತರವನ್ನು ಓದುತ್ತಿದ್ದೀರಿ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಏನು ಹೇಳಿತ್ತಿದ್ದಾರೆ, ನಮ್ಮ ಸರ್ಕಾರ, ಮುಖ್ಯಮಂತ್ರಿಗಳು ಒಂದು ಕೆರೆಯನ್ನು ಪೂರ್ಣ ಪ್ರಮಾಣದಲ್ಲಿ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡ ಬೇಕೆನ್ನುವುದು ಚಿಂತನೆಯಾಗಿದೆ. ಈಗಾಗಲೇ ಬಜೆಟ್‌ನಲ್ಲಿ ಘೋಷಣೆ ಮಾಡಿ ದಂತೆ ಒಂದೊಂದು ಕೆರೆಯನ್ನು ಪೂರ್ಣ ಪ್ರಮಾಣದಲ್ಲಿ ಅದು ತೂಬು ಇರಬಹುದು, ಕೆನಾಲ್ ಇರಬಹುದು ಮತ್ತು ಅದಕ್ಕೆ ಸಂಬಂಧಿಸಿದ ಬಂಡು ಇರಬಹುದು ಹಾಗೂ ರಾಜ್ಯಕಾಲುವೆ ಸೇರಿದಂತೆ ಎಲ್ಲವೂ ಸೇರಿ ಒಂದೊಂದು ಕೆರೆಯನ್ನು ಒಂದು ವರ್ಷದಲ್ಲಿ ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ಕ್ರಮವಹಿಸುತ್ತೇವೆನ್ನುವ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಕ್ತಾಯವಾಗಿದೆ, ಇನ್ನೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಆ.ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಟಿ.ಬಿ.ಜಯಚಂದ್ರ: ದಿನಾಂಕ: 7.7.2014ರ ಹನ್ನೊಂದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 189 ಪ್ರಶ್ನೆಗಳ ಪೈಕಿ 145 ಪ್ರಶ್ನೆಗಳ ಉತ್ತರಗಳನ್ನು ಸದನಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ.(ಅನುಬಂಧ–1)